ಎಲ್ಲಾ ಮೂಲಗಳಿಂದ ಸರ್ಕಾರಕ್ಕೆ ಎಷ್ಟು ಆದಾಯ ಜಮವಾಗುತ್ತದೆ

62 : (676)

ಶ್ರೀ ಪುಟ್ಟರಂಗಶೆಟ್ಟಿ. ಸಿ (ಚಾಮರಾಜನಗರ)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಅಕ್ಟೋಬರ್ 2012ರ ಅಂತ್ಯಕ್ಕೆ ಸಾರಿಗೆ, ಕಂದಾಯ ,ವಾಣಿಜ್ಯ ತೆರಿಗೆ, ಅಬಕಾರಿ ಮತ್ತಿತರ ಎಲ್ಲಾ ಮೂಲಗಳಿಂದ (ಕೇಂದ್ರ ಸರ್ಕಾರದ ಅನುದಾನ ಗ್ರ್ಯಾಂಟ್ಸ್ ಇತ್ಯಾದಿ) ಸರ್ಕಾರಕ್ಕೆ ಜಮಾವಾಗಿರುವ ಆದಾಯ ಎಷ್ಟು?

ಆ) ಅಕ್ಟೋಬರ್ 2012 ಅಂತ್ಯದವರೆಗೆ ಆರ್ಥಿಕ ವಿವಿಧ ಇಲಾಖೆಗಳಿಗೆ ಬಿಡುಗಡೆಗೊಳಿಸಲಾದ ಮೊತ್ತವೆಷ್ಟು? (ಇಲಾಖಾವಾರು, ಯೋಜನೆ ಮತ್ತು ಯೋಜನೇತರ ಮಾಹಿತಿ ಒದಗಿಸುವುದು)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಸೆಪ್ಟಂಬರ್ 2012ರ ಅಂತ್ಯಕ್ಕೆ ಸರ್ಕಾರಕ್ಕೆ ಜಮೆಯಾಗಿರುವ ಆದಾಯದ ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ಕ್ರ.ಸಂ	ವಿವರ	ಸೆಪ್ಟಂಬರ್2012 ರವರೆಗೆ (ವಾಸ್ತವಿಕ)
1	ವಾಣಿಜ್ಯ ತೆರಿಗೆ	15445
2	ರಾಜ್ಯ ಅಬಕಾರಿ	5558
3	ಮೋಟಾರು ವಾಹನ ತೆರಿಗೆ	1734
4	ಸ್ಟಾಂಪ್ ಮತ್ತು ನೊಂದಣಿ ಶುಲ್ಕ	2544
5	ಭೂ ಕಂದಾಯ	108
6	ಇತರೆ	201
7	ತೆರಿಗೆಯೇತರ ರಾಜಸ್ವ	1645
8	ಕೇಂದ್ರ ತೆರಿಗೆಯಲ್ಲಿ ರಾಜ್ಯದ ಪಾಲು	5612

9	ಕೇಂದ್ರ ಸರ್ಕಾರದಿಂದ ಅನುದಾನ	3681
10	ಕೇಂದ್ರ ಸರ್ಕಾರದಿಂದ ಸಾಲ	389
11	ಆಂತರಿಕ ಸಾಲ	2056
12	ಸಾಲ ಮತ್ತು ಮುಂಗಡ	26
13	ಭೂ ಮಾರಾಟ	19
	ಒಟ್ಟು	**39018**

ಆ) ಆರ್ಥಿಕ ಪ್ರತ್ಯಾಯೋಜನೆಯನ್ವಯ ಸರ್ಕಾರದ ವಿವಿಧ ಹಂತಗಳಲ್ಲಿ ಅನುದಾನ ಬಿಡುಗಡೆಗೆ ಆದೇಶವನ್ನು ಹೊರಡಿಸಲಾಗುವುದರಿಂದ ಬಿಡುಗಡೆ–ಯಾಗುವ ಹಣ ಒಂದೇ ಕಡೆ ಕ್ರೋಢೀಕೃತವಾಗುತ್ತಿಲ್ಲ. ಆದುದರಿಂದ ಪ್ರತಿ ಇಲಾಖೆಗೆ ಬಿಡುಗಡೆಯಾಗಿರುವ ಹಣದ ಬಗ್ಗೆ ಆರ್ಥಿಕ ಇಲಾಖೆಯಲ್ಲಿ ಮಾಹಿತಿ ಲಭ್ಯವಿರುವುದಿಲ್ಲ. ಆದರೆ, ಸೆಪ್ಟೆಂಬರ್ 2012ರ ಅಂತ್ಯಕ್ಕೆ ಯೋಜನೆ ಮತ್ತು ಯೋಜನೇತರದಲ್ಲಿ ಆಗಿರುವ ಖರ್ಚನ್ನು ಮಹಾಲೇಖಪಾಲರ ಲೆಕ್ಕಪನ್ನಾಧರಿಸಿ ಅನುಬಂಧದಲ್ಲಿ ನೀಡಲಾಗಿದೆ.

Annexure/ ಅನುಬಂಧ

Plan & Non Plan Expenditure upto the end of September 2012
ಸೆಪ್ಟೆಂಬರ್ 2012ರ ಅಂತ್ಯದವರೆಗೆ ಯೋಜನೆ ಮತ್ತು ಯೋಜನೇತರದಲ್ಲಿ ಮಾಡಿರುವ ಖರ್ಚು

(Rs. In crores / ರೂ. ಕೋಟಿಗಳಲ್ಲಿ)

D.No	Nomenclature	ಬೇಡಿಕೆ ವಿವರ	Expenditure/ ಖರ್ಚು	
			Plan / ಯೋಜನೆ	Non plan/ ಯೋಜನೇತರ
01	Agriculture & Horticulture	ಕೃಷಿ ಮತ್ತು ತೋಟಗಾರಿಕೆ	488	387
02	Animal Husbandry &Fisheries	ಪಶು ಸಂಗೋಪನೆ ಮತ್ತು ಮೀನುಗಾರಿಕೆ	299	180
03	Finance	ಆರ್ಥಿಕ ಇಲಾಖೆ	3	3484
04	Department of Personnel& Administrative Reforms	ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ	13	224
05	Home& Transport	ಒಳಾಡಳಿತ ಮತ್ತು ಸಾರಿಗೆ	44	1431
06	Infrastructure Development	ಮೂಲಭೂತ ಸೌಕರ್ಯ ಅಭಿವೃದ್ಧಿ	146	0
07	Rural Development& Panchayath Raj	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್	1186	570
08	Forest, Ecology& Environment	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ	57	200
09	Co-operation	ಸಹಕಾರ	210	69
10	Social Welfare	ಸಮಾಜ ಕಲ್ಯಾಣ	783	422
11	Women& Child Development	ಮಹಿಳಾಮತ್ತು ಮಕ್ಕಳ ಅಭಿವೃದ್ಧಿ	1219	282
12	Information, Tourism & Youth Services	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	75	31

D.No	Nomenclature	ಬೇಡಿಕೆ ವಿವರ	Expenditure/ ವೆಚ್ಚ	
			Plan / ಯೋಜನೆ	Non plan/ಯೋಜನೇತರ
13	Food & Civil Supplies	ಆಹಾರ ಮತ್ತು ನಾಗರೀಕ ಸರಬರಾಜು	0	497
14	Revenue	ಕಂದಾಯ	259	1295
15	Information Technology	ಮಾಹಿತಿ ತಂತ್ರಜ್ಞಾನ	53	3
16	Housing	ವಸತಿ	670	60
17	Education	ಶಿಕ್ಷಣ	1343	5656
18	Commerce& Industries	ವಾಣಿಜ್ಯ ಮತ್ತು ಕೈಗಾರಿಕೆ	90	138
19	Urban Development	ನಗರಾಭಿವೃದ್ಧಿ	358	1570
20	Public Works	ಲೋಕೋಪಯೋಗಿ	1290	745
21	Water Resources	ಜಲ ಸಂಪನ್ಮೂಲ	2185	151
22	Health& Family Welfare	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	656	965
23	Labour	ಕಾರ್ಮಿಕ	81	86
24	Energy	ಇಂದನ	368	3063
25	Kannada& Culture	ಕನ್ನಡ ಮತ್ತು ಸಂಸ್ಕೃತಿ	47	22
26	Planning,Statistcs, Science& Technology	ಯೋಜನೆ, ಸಾಂಖ್ಯಿಕ ವಿಜ್ಞಾನ ಮತ್ತು ತಂತ್ರಜ್ಞಾನ	82	22
27	Law	ಕಾನೂನು	18	197
28	Parlimentary Affairs& Legislation	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	0	59
29	Debt Servicing	ಋಣ ಮೇಲುಸ್ತುವಾರಿ	0	4237
	Total	ಒಟ್ಟು	**12025**	**26047**

ಶ್ರೀ ಸಿ.ಪುಟ್ಟರಂಗಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಾನು ಅಕ್ಟೋಬರ್ ಅಂತ್ಯದವರೆಗೆ ಮಾಹಿತಿಯನ್ನು ಕೇಳಿದ್ದೆ. ಆದರೆ ಸರ್ಕಾರ ಸೆಪ್ಟೆಂಬರ್ ತಿಂಗಳವರೆಗೂ ಮಾತ್ರ ಮಾಹಿತಿಯನ್ನು ಕೊಟ್ಟು ಮುಂದೆ ನಮ್ಮ ಹತ್ತಿರ ಮಾಹಿತಿ ಲಭ್ಯವಿರುವುದಿಲ್ಲವೆಂದು ಹೇಳಿ, ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಈ ರೀತಿ ಉತ್ತರ ಕೊಟ್ಟಿರುವುದರಿಂದ ಉತ್ತರ ಸರಿಯಾಗಿ ಸಿಕ್ಕಹಾಗೆ ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾಹಿತಿಯನ್ನು ಕೇಳಿದ್ದಾರೆ. ಅವರು ಅಂಕಿ-ಸಂಖ್ಯೆಗಳನ್ನು ಮತ್ತು ಜಮಾ ಆಗಿರುವ ಆದಾಯದ ಬಗ್ಗೆ ಕೇಳಿದ್ದಾರೆ. ಹಾಗಾಗಿ ಸೆಪ್ಟೆಂಬರ್ ಅಂತ್ಯದವರೆಗೆ ನಮ್ಮಲ್ಲಿ ಏನು ಮಾಹಿತಿಗಳು ಇವೆ, ಅವೆಲ್ಲವನ್ನು ಕೊಟ್ಟಿದ್ದೇವೆ. ಇನ್ನು ಅಕ್ಟೋಬರ್, ನವೆಂಬರ್ ತಿಂಗಳುಗಳ ಲೆಕ್ಕ ನಡೆಯುತ್ತಿದೆ, ಇದು day by day feed back ಇರುತ್ತದೆ. ಮಾನ್ಯ ಸದಸ್ಯರ ಮುಂದೆ ಈಗ ಒಂದು ತಿಂಗಳ ಮಾಹಿತಿ ಮಾತ್ರ ಇದೆ. ಅದರ ಎಲ್ಲಾ details ಅನ್ನು ಕೊಟ್ಟಿದ್ದೇವೆ, ಅದರಲ್ಲಿ ಏನಾದರೂ ಸ್ಪಷ್ಟೀಕರಣ ಕೇಳಿದರೆ ಕೊಡುವುದಕ್ಕೆ ನಾನು ತಯಾರಿದ್ದೇನೆ. ಮತ್ತೆ ಇನ್ನು ಉಳಿದ ಅಕ್ಟೋಬರ್ ತಿಂಗಳ ಮಾಹಿತಿಯನ್ನು ನಂತರ ಒದಗಿಸಿ ಕೊಡುತ್ತೇನೆ.

ಅಧ್ಯಕ್ಷರು : ಆಯಿತು.

ಪ್ರಶ್ನೆ : 63 (596)
ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಕುಡಿಯುವ ನೀರಿನ ಶುಲ್ಕದ ಏರಿಕೆ

64 (316)

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ)

(ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

1. ಮೈಸೂರು ಮಹಾನಗರ ಪಾಲಿಕೆಯವರು ನೀರಿನ ಶುಲ್ಕವನ್ನು ಏರಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;